ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಸದನದಲ್ಲಿ ಮಂಡಿಸಲಾದ ಉತ್ತರಗಳು

ಪಡಿತರ ಕಾರ್ಡ್ ವಿತರಣೆ

(ಅನುಬಂಧ–1)

185(291); ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)

ಅ) ಲೋಕಸಭಾ ಚುನಾವಣಾ ನೀತಿ ಸಂಹಿತೆಯಿಂದ ಆನ್‌ಲೈನ್ ಪಡಿತರ ಚೀಟಿಗಳ ವಿಲೇವಾರಿ ಹಾಗೂ ಅರ್ಜಿ ಸಲ್ಲಿಸುವಿಕೆ ಪ್ರಕ್ರಿಯೆ ನಿಲುಗಡೆ ಆಗಿತ್ತು, ಇದುವರೆಗೆ ಅದು ಪ್ರಾರಂಭವಾಗದೆ ಇರುವುದರಿಂದ ಮುದ್ರಣಗೊಂಡ ಕಾರ್ಡುಗಳ ವಿತರಣೆ ಹಾಗೂ ಬಾಕಿ ಇರುವ ಅರ್ಜಿಗಳ ವಿಲೇವಾರಿ ಸ್ಥಗಿತಗೊಂಡಿರುವುದರಿಂದ ಅರ್ಜಿದಾರರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಯಾವಾಗ ಈ ಪ್ರಕ್ರಿಯೆ ಪುನಃ ಪ್ರಾರಂಭವಾಗುವುದು?

ಶ್ರೀ ದಿನೇಶ್ ಗುಂಡೂರಾವ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಸಚಿವರು.)

ಅ) ಹೌದು. ಸರ್ಕಾರದ ಗಮನಕ್ಕೆ ಬಂದಿದೆ.

ಆ) ಮುದ್ರಣಗೊಂಡ ಕಾರ್ಡುಗಳ ವಿತರಣೆ ಪ್ರಕ್ರಿಯೆಯನ್ನು ಈಗಾಗಲೇ ಪ್ರಾರಂಭಿಸಲಾಗಿದೆ. ಹಾಗೂ ಜನರೇಟ್ ಮಾಡಲಾಗಿರುವ ಪಡಿತರ ಚೀಟಿಗಳನ್ನು ಮುದ್ರಿಸಿಕೊಡುವ ಪ್ರಕ್ರಿಯೆಯೂ ಪ್ರಾರಂಭವಾಗಿರುತ್ತದೆ. ಬಾಕಿ ಇರುವ ಅರ್ಜಿಗಳನ್ನು First in - First out (FIFO) ಮಾದರಿಯಲ್ಲಿ ವಿಲೆಗೊಳಿಸಲು ಕ್ರಮವಹಿಸಲಾಗುತ್ತದೆ.

ಯೋಜನೆಗಳ ವಿವರ

186(292); ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)

ಅ) ಹಿಂದುಳಿದ ವರ್ಗದ ಜನರಿಗೆ ಹಾಗೂ ಅಲೆಮಾರಿ, ಅರೆ ಅಲೆಮಾರಿ ಜನಾಂಗದವರಿಗೆ ಸರ್ಕಾರ ರೂಪಿಸಿದ ಯೋಜನೆಗಳು ಯಾವುವು;

ಆ) ಹಾವೇರಿ ಜಿಲ್ಲೆಯಲ್ಲಿ ತಾಲ್ಲೂಕುವಾರು 2013–14ನೇ ಸಾಲಿನಲ್ಲಿ ಎಲ್ಲಾ ಯೋಜನೆಗಳಲ್ಲಿ ನಿಗಧಿ ಪಡಿಸಿದ ಗುರಿ ಎಷ್ಟು;

ಇ) 31–03–2014ರೊಳಗಾಗಿ ಹಾವೇರಿ ಜಿಲ್ಲೆಯಲ್ಲಿ ತಾಲ್ಲೂಕುವಾರು ಎಲ್ಲಾ ಯೋಜನಾವಾರು ಸಾಧಿಸಿದ ಪ್ರಗತಿ ಎಷ್ಟು (ವಿವರ ನೀಡುವುದು)?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ಹಿಂದುಳಿದ ವರ್ಗದ ಜನರಿಗೆ ಹಾಗೂ ಅಲೆಮಾರಿ, ಅರೆ ಅಲೆಮಾರಿ ಜನಾಂಗದವರಿಗೆ ಸರ್ಕಾರ ರೂಪಿಸಿದ ಯೋಜನೆಗಳ ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) ಹಾವೇರಿ ಜಿಲ್ಲೆಯಲ್ಲಿ ತಾಲ್ಲೂಕುವಾರು 2013–14ನೇ ಸಾಲಿನಲ್ಲಿ ಎಲ್ಲಾ ಯೋಜನೆಗಳಲ್ಲಿ ನಿಗಧಿ ಪಡಿಸಿದ ಗುರಿಗಳ ವಿವರಗಳನ್ನು ಅನುಬಂಧ–2ರಲ್ಲಿ ಲಗತ್ತಿಸಿದೆ.

ಇ) 31–03–2014ರೊಳಗಾಗಿ ಹಾವೇರಿ ಜಿಲ್ಲೆಯಲ್ಲಿ ತಾಲ್ಲೂಕುವಾರು ಎಲ್ಲಾ ಯೋಜನಾವಾರು ಸಾಧಿಸಿದ ಪ್ರಗತಿ ವಿವರಗಳನ್ನು ಅನುಬಂಧ–3ರಲ್ಲಿ ಲಗತ್ತಿಸಿದೆ.

ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಒದಗಿಸಿರುವ ಮೀಸಲಾತಿ

ಭಾರತ ಸಂವಿಧಾನದ ಅನುಚ್ಛೇದ 15(4) ಮತ್ತು 16(4)ರಂತೆ ಶಿಕ್ಷಣ ಹಾಗೂ ನೇಮಕಾತಿಗಳಲ್ಲಿ, ಹಿಂದುಳಿದ ವರ್ಗದವರಿಗೆ ಸರ್ಕಾರದ ಆದೇಶ ಸಂ.ಸಕಇ 225 ಬಿಸಿಎ 2000, ದಿನಾಂಕ 30.03.2002ರಲ್ಲಿ ಒಟ್ಟು ಶೇ.28ರಷ್ಟು ಮೀಸಲಾತಿಯನ್ನು ಈ ಕೆಳಗಿನಂತೆ ನಿಗದಿಪಡಿಸಲಾಗಿದೆ.

ಪ್ರವರ್ಗ–1 : ಶೇ.04 ಪ್ರವರ್ಗ–2ಎ : ಶೇ.15
ಪ್ರವರ್ಗ–3ಎ : ಶೇ.04 ಪ್ರವರ್ಗ–3ಬಿ : ಶೇ.05

ಕೆನೆ ಪದರ ಮಿತಿ ವಾರ್ಷಿಕ ರೂ.4.50 ಲಕ್ಷ

ಪ್ರವರ್ಗ–1 ಕ್ಕೆ ಕೆನೆಪದರ ಮಿತಿ ಇರುವುದಿಲ್ಲ.

ಇಲಾಖೆಯ ಪ್ರಮುಖ ಕಾರ್ಯಕ್ರಮಗಳು

ಆದಾಯ ಮಿತಿಗಳನ್ನು 5–9–2013ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಲಾಗಿದೆ.)

I. ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳು:

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಇಲಾಖೆಯು, ಮೆಟ್ರಿಕ್–ಪೂರ್ವ/ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳು, ವಸತಿಶಾಲೆಗಳು/ಕಾಲೇಜುಗಳು ಆಶ್ರಮಶಾಲೆಗಳು, ಅನುದಾನಿತ ವಿದ್ಯಾರ್ಥಿನಿಲಯಗಳು, ಅನುದಾನಿತ ಅನಾಥಾಲಯಗಳು, ಮೆಟ್ರಿಕ್–ಪೂರ್ವ ಮತ್ತು ಮೆಟ್ರಿಕ್–ನಂತರದ ವಿದ್ಯಾರ್ಥಿವೇತನ, ಊಟ ಮತ್ತು ವಸತಿ ಸಹಾಯ ಯೋಜನೆ, ಶುಲ್ಕ ವಿನಾಯಿತಿ ಇತ್ಯಾದಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ.

ಅ. ವಿದ್ಯಾರ್ಥಿನಿಲಯಗಳು ಮತ್ತು ವಸತಿಶಾಲೆಗಳು

1. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು

ವಾರ್ಷಿಕ ಆದಾಯ ಮಿತಿ : ಪ್ರವರ್ಗ–1 ರೂ.1.00 ಲಕ್ಷ,
ಪ್ರವರ್ಗ–2ಎ, 2ಬಿ, 3ಎ, ಮತ್ತು 3ಬಿ – ರೂ.44,500/–

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 1061 ಬಾಲಕರ ಹಾಗೂ 286 ಬಾಲಕಿಯರ ಒಟ್ಟು 1347 ಮೆಟ್ರಿಕ್–ಪೂರ್ವ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಇದರಿಂದ 69707 ವಿದ್ಯಾರ್ಥಿಗಳು ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಈ ನಿಲಯಗಳಲ್ಲಿ ಈ ಕೆಳಗಿನಂತೆ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

- 5 ರಿಂದ 10ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ
- ಆಹಾರ ವೆಚ್ಚ ಮಾಸಿಕ ರೂ.900/–ರಂತೆ 10 ತಿಂಗಳಿಗೆ
- ಉಚಿತ ವಸತಿ ಸೌಲಭ್ಯ
- ಸಮವಸ್ತ್ರಗಳು 2 ಜೊತೆ
- ಪಠ್ಯಪುಸ್ತಕ ಮತ್ತು ಲೇಖನಸಾಮಗ್ರಿ ವಾರ್ಷಿಕ ರೂ.200/–
- ಜಮಖಾನ ಮತ್ತು ಹೊದಿಕೆಗಳು ಪ್ರತಿ 3 ವರ್ಷಕ್ಕೊಮ್ಮೆ
- ವೈದ್ಯಕೀಯ ವೆಚ್ಚ – 50 ಸಂಖ್ಯಾಬಲದ ವಿದ್ಯಾರ್ಥಿನಿಲಯಕ್ಕೆ ವಾರ್ಷಿಕ ರೂ.5,000/–. 50 ಕ್ಕಿಂತ ಮೇಲ್ಪಟ್ಟ ವಿದ್ಯಾರ್ಥಿನಿಲಯಕ್ಕೆ ವಾರ್ಷಿಕ ರೂ.10,000/–
- ಪ್ರತಿ ಆರೆಕಾಲಿಕ ಬೋಧಕರಿಗೆ ಮಾಸಿಕ ರೂ.1,000/–ರಂತೆ 3 ಬೋಧಕರು ಪ್ರತಿ ವಿದ್ಯಾರ್ಥಿನಿಲಯಕ್ಕೆ
- ಮಾಸಿಕ ಶುಚಿ ಸಂಭ್ರಮ ಕಿಟ್ ಪ್ರತಿ ನಿಲಯಾರ್ಥಿಗೆ 10 ತಿಂಗಳಿಗೆ
- ಕ್ಷೌರದ ವೆಚ್ಚ ಪ್ರತಿ ಬಾಲಕನಿಗೆ 10 ತಿಂಗಳಿಗೆ ರೂ.150/–
- ಕ್ರೀಡಾ ಸಾಮಗ್ರಿಗಳು ವಾಸ್ತವ ದರದಲ್ಲಿ ನಿಲಯಕ್ಕೆ ಒಂದು ಸೆಟ್ ಪ್ರತಿ ವರ್ಷಕ್ಕೊಮ್ಮೆ
- ರಾಜ್ಯಮಟ್ಟದ ಒಂದು ಆಂಗ್ಲ ಮತ್ತು ಒಂದು ಕನ್ನಡ ದಿನಪತ್ರಿಕೆ ಹಾಗೂ Wisdom Magazine-1
- ವಿದ್ಯಾರ್ಥಿನಿಲಯದ ಗ್ರಂಥಾಲಯಕ್ಕಾಗಿ ಪ್ರಥಮ ಬಾರಿಗೆ ರೂ.50,000/– ನಂತರದ ಪ್ರತಿ ವರ್ಷಕ್ಕೆ ರೂ.5,000/–

2. ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು

ವಾರ್ಷಿಕ ಆದಾಯ ಮಿತಿ: ಪ್ರವರ್ಗ–1 ರೂ.2.50 ಲಕ್ಷ
ಪ್ರವರ್ಗ–2ಎ, 2ಬಿ, 3ಎ, ಮತ್ತು 3ಬಿ – ರೂ.1.00 ಲಕ್ಷ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 318 ಪುರುಷರ ಹಾಗೂ 317 ಮಹಿಳೆಯರ ಒಟ್ಟು 635 ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಇದರಿಂದ 74894 ವಿದ್ಯಾರ್ಥಿಗಳು ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಈ ನಿಲಯಗಳಲ್ಲಿ ಈ ಕೆಳಗಿನಂತೆ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

- ಪದವಿ ಪೂರ್ವ ಕೋರ್ಸಿನಿಂದ ಸ್ನಾತಕೋತ್ತರ ಪದವಿಗಳವರೆಗೆ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ
- ಆಹಾರ ವೆಚ್ಚ ಮಾಸಿಕ ರೂ.1,000/–ರಂತೆ 10 ತಿಂಗಳಿಗೆ
- ಉಚಿತ ವಸತಿ ಸೌಲಭ್ಯ
- ಕ್ರೀಡಾ ಸಾಮಗ್ರಿಗಳು ಪ್ರತಿ ವರ್ಷಕ್ಕೊಮ್ಮೆ, ಪ್ರತಿ ನಿಲಯಕ್ಕೆ ಒಂದು ಸೆಟ್ ವಾಸ್ತವ ದರದಲ್ಲಿ
- ರಾಜ್ಯಮಟ್ಟದ ಒಂದು ಆಂಗ್ಲ, ಒಂದು ಕನ್ನಡ ದಿನಪತ್ರಿಕೆ, Employment News-1, Competition Success Review/Wizard-1, Mirror Magazine-1
- ಅ) ಸ್ನಾತಕೋತ್ತರ / ವೃತ್ತಿಪರ ವಿದ್ಯಾರ್ಥಿನಿಲಯಗಳ ಗ್ರಂಥಾಲಯಕ್ಕಾಗಿ ಪ್ರಥಮ ಬಾರಿಗೆ ರೂ.1.25 ಲಕ್ಷ, ನಂತರದ ಪ್ರತಿ ವರ್ಷಕ್ಕೆ ರೂ.30,000/–
  ಆ) ಇತರೆ ವಿದ್ಯಾರ್ಥಿನಿಲಯಗಳಿಗೆ ಪ್ರಥಮ ಬಾರಿಗೆ ರೂ.1.00 ಲಕ್ಷ, ನಂತರದ ಪ್ರತಿ ವರ್ಷಕ್ಕೆ ರೂ.20,000/–.

3. ಸರ್ಕಾರಿ ಆಶ್ರಮಶಾಲೆಗಳು

ವಾರ್ಷಿಕ ಆದಾಯ ಮಿತಿ: ಪ್ರವರ್ಗ–1 ರೂ.1.00 ಲಕ್ಷ
ಪ್ರವರ್ಗ–2ಎ, 2ಬಿ, 3ಎ, ಮತ್ತು 3ಬಿ – ರೂ.44,500/–

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 37 ಆಶ್ರಮಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, 1,600 ವಿದ್ಯಾರ್ಥಿಗಳು ಪ್ರಯೋಜನವನ್ನು ಪಡೆಯುತ್ತಿದ್ದಾರೆ.

- 1ನೇ ತರಗತಿಯಿಂದ 4ನೇ ತರಗತಿಯವರೆಗಿನ ಹಿಂದುಳಿದ ವರ್ಗಗಳ ಮಕ್ಕಳಿಗೆ ಪ್ರವೇಶಾವಕಾಶ
- ಪ್ರವರ್ಗ-1ಕ್ಕೆ ಕೇ.75 ಹಾಗೂ ಇತರೆ ಪ್ರವರ್ಗಗಳಿಗೆ ಕೇ.25ರ ಮೀಸಲಾತಿ
- ಆಹಾರ ವೆಚ್ಚ ಮಾಸಿಕ ರೂ.700/- ರಂತೆ 10 ತಿಂಗಳಿಗೆ
- ವಾರ್ಷಿಕ 2 ಜೊತೆ ಸಮವಸ್ತ್ರ
- ಲೇಖನ ಸಾಮಗ್ರಿ ವಾರ್ಷಿಕ ರೂ.50/-ರ ವೆಚ್ಚದಲ್ಲಿ

4. ಪ್ರಾಸಗಿ ಅನುದಾನಿತ ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯಗಳು

ವಾರ್ಷಿಕ ಆದಾಯ ಮಿತಿ: ಪ್ರವರ್ಗ-1 ರೂ.1.00 ಲಕ್ಷ
ಪ್ರವರ್ಗ-2ಎ, 2ಬಿ, 3ಎ, ಮತ್ತು
3ಬಿ – ರೂ.44,500/-

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 221 ಬಾಲಕ ಹಾಗೂ 19 ಬಾಲಕಿಯರ ಒಟ್ಟು 240 ಪ್ರಾಸಗಿ ಅನುದಾನಿತ ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, 12,898 ವಿದ್ಯಾರ್ಥಿಗಳು ಪ್ರಯೋಜನವನ್ನು ಪಡೆಯುತ್ತಿದ್ದಾರೆ.

- 5 ರಿಂದ 10ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ
- ಆಹಾರ ವೆಚ್ಚ ಮಾಸಿಕ ರೂ.500/-ರಂತೆ 10 ತಿಂಗಳಿಗೆ

5. ಪ್ರಾಸಗಿ ಅನುದಾನಿತ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳು

ವಾರ್ಷಿಕ ಆದಾಯ ಮಿತಿ: ಪ್ರವರ್ಗ-1 ರೂ.2.50ಲಕ್ಷ
ಪ್ರವರ್ಗ-2ಎ, 2ಬಿ, 3ಎ, ಮತ್ತು
3ಬಿ – ರೂ.1.00 ಲಕ್ಷ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 16 ಪುರುಷರ ಹಾಗೂ 2 ಮಹಿಳೆಯರ ಒಟ್ಟು 18 ಪ್ರಾಸಗಿ ಅನುದಾನಿತ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, 654 ವಿದ್ಯಾರ್ಥಿಗಳು ಪ್ರಯೋಜನವನ್ನು ಪಡೆಯುತ್ತಿದ್ದಾರೆ.

- ಪದವಿ ಪೂರ್ವ ಕೋರ್ಸಿನಿಂದ ಸ್ನಾತಕೋತ್ತರ ಪದವಿಗಳವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ
- ಆಹಾರ ವೆಚ್ಚ ಮಾಸಿಕ ರೂ.600/-ರಂತೆ 10 ತಿಂಗಳಿಗೆ

6. ಪ್ರಾಸಗಿ ಅನುದಾನಿತ ಅನಾಥಾಲಯಗಳು

ವಾರ್ಷಿಕ ಆದಾಯ ಮಿತಿ:

ಅನಾಥರು – ಆದಾಯ ಮಿತಿ ಇರುವುದಿಲ್ಲ
ನಿರ್ಗತಿಕರು – ಪ್ರವರ್ಗ-1 ರೂ.1.00 ಲಕ್ಷ
ಪ್ರವರ್ಗ-2ಎ, 2ಬಿ, 3ಎ, ಮತ್ತು
3ಬಿ – ರೂ.44,500/-

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 56 ಬಾಲಕರ ಹಾಗೂ 1 ಬಾಲಕಿಯರ ಒಟ್ಟು 57 ಪ್ರಾಸಗಿ ಅನುದಾನಿತ ಅನಾಥಾಲಯಗಳು ಕಾರ್ಯನಿರ್ವಹಿಸುತ್ತಿದ್ದು, 7,920 ವಿದ್ಯಾರ್ಥಿಗಳು ಪ್ರಯೋಜನವನ್ನು ಪಡೆಯುತ್ತಿದ್ದಾರೆ.

- 1 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ನಿರ್ಗತಿಕ ಹಾಗೂ ಅನಾಥ ಮಕ್ಕಳು ಸೌಲಭ್ಯಕ್ಕೆ ಅರ್ಹರು
- ಆಹಾರ ವೆಚ್ಚ ಮಾಸಿಕ ರೂ.350/-ರಂತೆ 12 ತಿಂಗಳಿಗೆ ಪ್ರತಿ ವಿದ್ಯಾರ್ಥಿಗೆ

7. ಮೊರಾರ್ಜಿ ದೇಸಾಯಿ ವಸತಿಶಾಲೆಗಳು

ವಾರ್ಷಿಕ ಆದಾಯ ಮಿತಿ: ಪ್ರವರ್ಗ-1 ರೂ.1.00 ಲಕ್ಷ
ಪ್ರವರ್ಗ-2ಎ, 2ಬಿ, 3ಎ, ಮತ್ತು
3ಬಿ – ರೂ.44,500/-

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 133 ಮೊರಾರ್ಜಿ ದೇಸಾಯಿ ವಸತಿಶಾಲೆಗಳು ಕಾರ್ಯನಿರ್ವಹಿಸುತ್ತಿವೆ.

- ಪ್ರವೇಶ 6ನೇ ತರಗತಿಯಿಂದ
- ಆಹಾರ ವೆಚ್ಚ ಮಾಸಿಕ ರೂ.1,000/- ರಂತೆ 10 ತಿಂಗಳಿಗೆ
- ಸಮವಸ್ತ್ರ, ಶೂ ಮತ್ತು ಕಾಲುಚೀಲ ರೂ.800/-ರ ವೆಚ್ಚದಲ್ಲಿ 2 ಜೊತೆ
- ಹಾಸಿಗೆ ಹೊದಿಕೆ ವಾರ್ಷಿಕ ರೂ.600/-ರ ವೆಚ್ಚದಲ್ಲಿ
- ವೈದ್ಯಕೀಯ ವೆಚ್ಚಗಳು ಪ್ರತಿ ಶಾಲೆಗೆ ವಾರ್ಷಿಕ ರೂ.10,000/- (ವೈದ್ಯರ ಭೇಟಿ ವೆಚ್ಚ ಸೇರಿ)
- ಇತರೆ ವೆಚ್ಚಗಳು ಮಾಸಿಕ ರೂ.100/- ರಂತೆ 10 ತಿಂಗಳಿಗೆ
- ಹೊಸದಾಗಿ ಸೇರುವ ವಿದ್ಯಾರ್ಥಿಗೆ ಮಂಚ ಮತ್ತು ಟ್ರಂಕ್ ರೂ.3,000/- ವೆಚ್ಚದಲ್ಲಿ

8. ಮೊರಾರ್ಜಿ ದೇಸಾಯಿ ಪದವಿಪೂರ್ವ ವಸತಿ ಕಾಲೇಜು

ವಾರ್ಷಿಕ ಆದಾಯ ಮಿತಿ: ಪ್ರವರ್ಗ-1 ರೂ.2.50 ಲಕ್ಷ
ಪ್ರವರ್ಗ-2ಎ, 2ಬಿ, 3ಎ, ಮತ್ತು
3ಬಿ – ರೂ.1.00 ಲಕ್ಷ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 12 ಮೊರಾರ್ಜಿ ದೇಸಾಯಿ ಪದವಿಪೂರ್ವ ವಸತಿ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಇಲ್ಲಿನ ವಿದ್ಯಾರ್ಥಿಗಳಿಗೆ ಆಹಾರ ವೆಚ್ಚ ಮಾಸಿಕ ರೂ.1,000/- ರಂತೆ 10 ತಿಂಗಳಿಗೆ ನೀಡಲಾಗುತ್ತಿದ್ದ ಹಾಗೂ ಸಮವಸ್ತ್ರ, ಹಾಸಿಗೆ ಹೊದಿಕೆ, ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ಆ. ವಿದ್ಯಾರ್ಥಿವೇತನ ಕಾರ್ಯಕ್ರಮಗಳು

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ, ರಾಜ್ಯ ಸರ್ಕಾರದ ಮೆಟ್ರಿಕ್-ಪೂರ್ವ, ಮೆಟ್ರಿಕ್-ನಂತರದ ವಿದ್ಯಾರ್ಥಿವೇತನ, ಊಟ ಮತ್ತು ವಸತಿ ಸಹಾಯ ಹಾಗೂ ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರದ ಶುಲ್ಕ ವಿನಾಯಿತಿ ಮುಂತಾದ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ.

1. ಭಾರತ ಸರ್ಕಾರದ ಮೆಟ್ರಿಕ್ – ಪೂರ್ವ ವಿದ್ಯಾರ್ಥಿ ವೇತನ

ವಾರ್ಷಿಕ ಆದಾಯ ಮಿತಿ : ರೂ.44,500/–

- 1 ರಿಂದ 5ನೇ ತರಗತಿಯವರೆಗೆ ಮಾಸಿಕ ರೂ.25/–ರಂತೆ 10 ತಿಂಗಳಿಗೆ
- 6 ರಿಂದ 8ನೇ ತರಗತಿಯವರೆಗೆ ಮಾಸಿಕ ರೂ.40/–ರಂತೆ 10 ತಿಂಗಳಿಗೆ
- 9 ರಿಂದ 10ನೇ ತರಗತಿಯವರೆಗೆ ಮಾಸಿಕ ರೂ.50/–ರಂತೆ 10 ತಿಂಗಳಿಗೆ
- ಇದರ ಜೊತೆ ಅಡ್‌ಹಾಕ್ ಗ್ರಾಂಟ್ ರೂ.500/– ವಾರ್ಷಿಕವಾಗಿ

2. ರಾಜ್ಯ ಸರ್ಕಾರದ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ

ವಾರ್ಷಿಕ ಆದಾಯ ಮಿತಿ: ಪ್ರವರ್ಗ–1 ರೂ.1.00 ಲಕ್ಷ
ಪ್ರವರ್ಗ–2ಎ, 2ಬಿ, 3ಎ, ಮತ್ತು 3ಬಿ – ರೂ.44,500/–

- 5ನೇ ತರಗತಿಯಿಂದ 7ನೇ ತರಗತಿ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.250/–
- 8ನೇ ತರಗತಿಯಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.500/–
- 8ನೇ ತರಗತಿಯಿಂದ 10ನೇ ತರಗತಿಯ ಬಾಲಕಿಯರಿಗೆ ವಾರ್ಷಿಕ ರೂ.600/–

3. ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ (ಡೇ ಸ್ಕಾಲರ್)

ವಾರ್ಷಿಕ ಆದಾಯ ಮಿತಿ: ಪ್ರವರ್ಗ–1 ರೂ.2.50 ಲಕ್ಷ
ಪ್ರವರ್ಗ–2ಎ, 2ಬಿ, 3ಎ, ಮತ್ತು 3ಬಿ – ರೂ.1.00 ಲಕ್ಷ

- ರಾಜ್ಯ ಸರ್ಕಾರದ ವತಿಯಿಂದ, ವಿವಿಧ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮೆಟ್ರಿಕ್–ನಂತರದ ವಿದ್ಯಾರ್ಥಿಗಳಿಗೆ ಕೋರ್ಸಿನ ಗುಂಪುವಾರು ಪ್ರತಿ ತಿಂಗಳಿಗೆ ಈ ಕೆಳಗಿನಂತೆ ಮೆಟ್ರಿಕ್–ನಂತರದ ವಿದ್ಯಾರ್ಥಿವೇತನವನ್ನು 10 ತಿಂಗಳ ಅವಧಿಗೆ ಅರ್ಹತೆ ಮತ್ತು ಆದಾಯಮಿತಿಯನ್ನು ಪರಿಗಣಿಸಿ, ಅವರ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲಾಗುವುದು.

ಗುಂಪು–ಎ–ರೂ.350/–	ವೈದ್ಯಕೀಯ ಇಂಜಿನಿಯರಿಂಗ್, ಎಂ.ಫಿಲ್, ಪಿ.ಹೆಚ್.ಡಿ., ಎಲ್.ಎಲ್.ಎಮ್., ಇತ್ಯಾದಿ.
ಗುಂಪು–ಬಿ–ರೂ.335/–	ಎಲ್.ಎಲ್.ಬಿ., ಹೋಟೆಲ್ ಮ್ಯಾನೇಜ್‌ಮೆಂಟ್, ಎಂ.ಎ., ಎಂ.ಎಸ್ಸಿ, ಎಂ.ಕಾಂ., ಇತ್ಯಾದಿ.
ಗುಂಪು–ಸಿ–ರೂ.210/–	ಬಿ.ಎ., ಬಿ.ಎಸ್ಸಿ., ಬಿ.ಕಾಂ., ಇತ್ಯಾದಿ.
ಗುಂಪು–ಡಿ–ರೂ.210/–	ಐ.ಟಿ.ಐ., 3 ವರ್ಷದ ಡಿಪ್ಲೊಮಾ, ಪಿ.ಯು.ಸಿ. ಇತ್ಯಾದಿ.

4. ವಿದ್ಯಾಸಿರಿ – ಊಟ ಮತ್ತು ವಸತಿ ಸಹಾಯ ಯೋಜನೆ

ವಾರ್ಷಿಕ ಆದಾಯ ಮಿತಿ: ಪ್ರವರ್ಗ-I ರೂ.2.50 ಲಕ್ಷ
ಪ್ರವರ್ಗ-2ಎ, 2ಬಿ, 3ಎ, ಮತ್ತು
3ಬಿ – ರೂ.1.00 ಲಕ್ಷ

1. ಯಾವುದೇ ಇಲಾಖೆಯ ಸರ್ಕಾರಿ / ಸರ್ಕಾರಿ ಅನುದಾನಿತ ವಿದ್ಯಾರ್ಥಿನಿಲಯ / ವಸತಿ ಕಾಲೇಜುಗಳಲ್ಲಿ, ಪ್ರವೇಶ ದೊರೆಯದ ಹಾಗೂ ಮೆಟ್ರಿಕ್-ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ, ಊಟ ಮತ್ತು ವಸತಿ ಸಹಾಯವನ್ನು ನೀಡಲಾಗುವುದು.

2. ಈ ಯೋಜನೆಯಡಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ, ಪ್ರತಿ ತಿಂಗಳಿಗೆ ರೂ.1,500/-ರಂತೆ, ಶೈಕ್ಷಣಿಕ ಅವಧಿಯ 10 ತಿಂಗಳಿಗೆ ಒಟ್ಟು ರೂ.15,000/- ಸಹಾಯಧನವನ್ನು, ಇತರೆ ನಿಬಂಧನೆಗಳಿಗೊಳಪಟ್ಟು, ಅವರು ಯಾವುದಾದರೂ ಕೋರ್ ಬ್ಯಾಂಕಿಂಗ್ ವ್ಯವಸ್ಥೆ ಇರುವ ಬ್ಯಾಂಕಿನಲ್ಲಿ ತೆರೆದಿರುವ ಬ್ಯಾಂಕ್ ಖಾತೆಗೆ, ಆನ್‌ಲೈನ್ ಮೂಲಕ ಜಮಾ ಮಾಡಲಾಗುವುದು.

3. ವಿದ್ಯಾರ್ಥಿಗಳು (i)ವಿದ್ಯಾರ್ಥಿ ನಿಲಯದಲ್ಲಿ ಪ್ರವೇಶ, (ii) ಊಟ ಮತ್ತು ವಸತಿ ಸಹಾಯ ಯೋಜನೆ ಮತ್ತು (iii) ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ – ಇವುಗಳಲ್ಲಿ ಯಾವುದಾದರೂ ಒಂದು ಸೌಲಭ್ಯಕ್ಕೆ ಮಾತ್ರ ಅರ್ಹರಿರುತ್ತಾರೆ.

4. ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹರಾದವರು, ಆನ್‌ಲೈನ್ (Online) ಮೂಲಕ ಅರ್ಜಿ ಸಲ್ಲಿಸಬೇಕು.

5. ಶುಲ್ಕ ವಿನಾಯಿತಿ

ವಾರ್ಷಿಕ ಆದಾಯ ಮಿತಿ:
ಭಾರತ ಸರ್ಕಾರ– ರೂ.1.00 ಲಕ್ಷ

~~ರಾಜ್ಯ ಸರ್ಕಾರ – ಪ್ರವರ್ಗ-I ರೂ.2.50 ಲಕ್ಷ~~
~~ಪ್ರವರ್ಗ-2ಎ, 2ಬಿ, 3ಎ, ಮತ್ತು~~
~~3ಬಿ– ರೂ.1.00 ಲಕ್ಷ.~~

ಅರ್ಹ ವಿದ್ಯಾರ್ಥಿಗಳಿಗೆ ನಿಗದಿತ ಶುಲ್ಕಗಳನ್ನು ಭಾರತ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಅನುದಾನದಿಂದ ನೀಡಲಾಗುವುದು.

6. ನಿಲಯಾರ್ಥಿಗಳಿಗೆ ಪ್ರೋತ್ಸಾಹಧನ

ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿದ್ದು, ವಾರ್ಷಿಕ ಪರೀಕ್ಷೆಗಳಲ್ಲಿ ಪ್ರಥಮ ಪ್ರಯತ್ನದಲ್ಲಿ, ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದವರಿಗೆ ಈ ಕೆಳಕಂಡಂತೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.

- 7ನೇ ತರಗತಿಯ ನಿಲಯಾರ್ಥಿಗೆ ರೂ.75/-
- ಎಸ್.ಎಸ್.ಎಲ್.ಸಿ ನಿಲಯಾರ್ಥಿಗೆ ರೂ.200/-
- ಪಿಯುಸಿ, ಡಿಪ್ಲೊಮಾ ಕೋರ್ಸುಗಳ ನಿಲಯಾರ್ಥಿಗೆ ರೂ.300/-
- ಪದವಿ (ಬಿ.ಎ., ಬಿ.ಕಾಂ., ಬಿ.ಎಸ್ಸಿ.) ನಿಲಯಾರ್ಥಿಗೆ ರೂ.400/-
- ಸ್ನಾತಕೋತ್ತರ ನಿಲಯಾರ್ಥಿಗೆ ರೂ.500/-

II. ತರಬೇತಿ ಕಾರ್ಯಕ್ರಮಗಳು

ಹಿಂದುಳಿದ ವರ್ಗಗಳ ವಿದ್ಯಾವಂತ ನಿರುದ್ಯೋಗಿ ಯುವಕ-ಯುವತಿಯರಿಗೆ ಉದ್ಯೋಗ ಅವಕಾಶಗಳನ್ನು ಒದಗಿಸಲು ವಿವಿಧ ರೀತಿಯ ತರಬೇತಿಗಳನ್ನು ಇಲಾಖೆಯ ಮೂಲಕ ಒದಗಿಸಲಾಗುತ್ತಿದೆ.

1. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿ

ವಾರ್ಷಿಕ ಆದಾಯ ಮಿತಿ: ಪ್ರವರ್ಗ-I ರೂ.4.50 ಲಕ್ಷ
ಪ್ರವರ್ಗ-2ಎ, 2ಬಿ, 3ಎ, ಮತ್ತು
3ಬಿ – ರೂ.3.50 ಲಕ್ಷ

- ಐ.ಎ.ಎಸ್. / ಕೆ.ಎ.ಎಸ್. / ಬ್ಯಾಂಕಿಂಗ್ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ (ಪ್ರಾಥಮಿಕ ಹಾಗೂ ಮುಖ್ಯ ಪರೀಕ್ಷೆ) ಪರೀಕ್ಷಾ ಪೂರ್ವ ತರಬೇತಿಯನ್ನು ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಪ್ರತಿಷ್ಠಿತ ಸಂಸ್ಥೆಗಳ ಮೂಲಕ ಒದಗಿಸಲಾಗುವುದು.
- ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳ ತರಬೇತಿ ಶುಲ್ಕ ಮತ್ತು ಮಾಸಿಕ ಶಿಷ್ಯ ವೇತನವನ್ನು ಇಲಾಖೆಯಿಂದ ನೀಡಲಾಗುವುದು.
- ಕೇಂದ್ರ ಲೋಕಸೇವಾ ಆಯೋಗವು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳ ಪರೀಕ್ಷಾ ಪೂರ್ವ ತರಬೇತಿಯನ್ನು ದೆಹಲಿಯಲ್ಲಿ ಪಡೆಯುವ ಅಭ್ಯರ್ಥಿಗಳಿಗೆ ಮಾಸಿಕ ರೂ.8,000/- ದಂತೆ, ಹೈದರಾಬಾದ್‌ನಲ್ಲಿ ಪಡೆಯುವ ಅಭ್ಯರ್ಥಿಗಳಿಗೆ ಮಾಸಿಕ ರೂ.6,000/- ದಂತೆ, ಹಾಗೂ ಕರ್ನಾಟಕ ರಾಜ್ಯದ ತರಬೇತಿ ಕೇಂದ್ರಗಳಲ್ಲಿ ಪಡೆಯುವ ಹೊರ ಜಿಲ್ಲೆಯ ಅಭ್ಯರ್ಥಿಗಳಿಗೆ ಮಾಸಿಕ ರೂ.4,000/- ದಂತೆ ಹಾಗೂ ಸ್ಥಳೀಯ ಅಭ್ಯರ್ಥಿಗಳಿಗೆ ~~ರೂ.2,000/-~~ ದಂತೆ ಶಿಷ್ಯವೇತನವನ್ನು ಕನಿಷ್ಠ 7 ತಿಂಗಳ ತರಬೇತಿಯ ಅವಧಿಗೆ ನೀಡಲಾಗುತ್ತಿದೆ.

2. ಕೌಶಲ್ಯ ತರಬೇತಿ ಕಾರ್ಯಕ್ರಮ

ವಾರ್ಷಿಕ ಆದಾಯ ಮಿತಿ: ಪ್ರವರ್ಗ-I ರೂ.2.50 ಲಕ್ಷ
ಪ್ರವರ್ಗ-2ಎ, 2ಬಿ, 3ಎ, ಮತ್ತು
3ಬಿ – ರೂ.1.00 ಲಕ್ಷ

ಹಿಂದುಳಿದ ವರ್ಗಗಳ ನಿರುದ್ಯೋಗಿ ಅಭ್ಯರ್ಥಿಗಳಿಗೆ ವಿವಿಧ ವೃತ್ತಿಪರ ತರಬೇತಿಗಳನ್ನು ಗರಿಷ್ಠ 6 ತಿಂಗಳ ಅವಧಿಗೆ ಒದಗಿಸುತ್ತಿದ್ದು, ಮಾಸಿಕ ರೂ.500/-ರಂತೆ ಶಿಷ್ಯವೇತನವನ್ನು ನೀಡಲಾಗುತ್ತಿದೆ.

3. ನರ್ಸಿಂಗ್/ಪ್ಯಾರಾ ಮೆಡಿಕಲ್ ತರಬೇತಿ

ವಾರ್ಷಿಕ ಆದಾಯ ಮಿತಿ: ಪ್ರವರ್ಗ–1 ರೂ.2.50 ಲಕ್ಷ
ಪ್ರವರ್ಗ–2ಎ, 2ಬಿ, 3ಎ, ಮತ್ತು 3ಬಿ – ರೂ.1.00 ಲಕ್ಷ

ಜಿ.ಎನ್.ಎಂ. ಮತ್ತು ಬಿ.ಎಸ್ಸಿ. ನರ್ಸಿಂಗ್ ಕೋರ್ಸುಗಳಿಗೆ ತರಬೇತಿ ಪಡೆಯುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ತರಬೇತಿ ಶುಲ್ಕ ಹಾಗೂ ತರಬೇತಿ ಭತ್ಯೆಯನ್ನು ಇಲಾಖೆಯಿಂದ ನೀಡಲಾಗುತ್ತಿದೆ.

- ತರಬೇತಿ ಕೋರ್ಸಿನ ಮೆಟ್ಟ ಪ್ರತಿ ಅಭ್ಯರ್ಥಿಗೆ ರೂ.5,000/– ವಾರ್ಷಿಕ
- ಮಾಸಿಕ ಸ್ಟೈಪೆಂಡ್ ರೂ.1,000/–ದಂತೆ
- ತರಬೇತಿಯ ಅವಧಿಯಲ್ಲಿ ಸಮವಸ್ತ್ರ ಶುಲ್ಕ ಹಾಗೂ ಪುಸ್ತಕಗಳ ವೆಚ್ಚವನ್ನು ನಿಯಮಾನುಸಾರ ನೀಡಲಾಗುವುದು
- ಕನಿಷ್ಠ ಹಾಜರಾತಿ ಶೇಕಡ 75ರಷ್ಟು ಇರಬೇಕು
- ಪ್ಯಾರಾ ಮೆಡಿಕಲ್ ತರಬೇತಿ ಪಡೆಯುತ್ತಿರುವವರಿಗೆ ನಿಯಮಾನುಸಾರ ತರಬೇತಿ ಶುಲ್ಕವನ್ನು ನೀಡಲಾಗುವುದು

4. ಹೊಲಿಗೆ ತರಬೇತಿ ಕೇಂದ್ರಗಳು

ವಾರ್ಷಿಕ ಆದಾಯ ಮಿತಿ: ಪ್ರವರ್ಗ–1 ರೂ.2.50 ಲಕ್ಷ
ಪ್ರವರ್ಗ–2ಎ, 2ಬಿ, 3ಎ, ಮತ್ತು
.....3ಬಿ..ಗ ರೂ.1.00 ಲಕ್ಷ

ಹಿಂದುಳಿದ ವರ್ಗಗಳ ಮಹಿಳೆಯರಿಗೆ ಸ್ವಯಂ ಉದ್ಯೋಗದಲ್ಲಿ ತೊಡಗಿಸಿಕೊಳ್ಳುವಲ್ಲಿ ನೆರವಾಗಲು ಹೊಲಿಗೆ ತರಬೇತಿಯನ್ನು ನೀಡಲಾಗುತ್ತದೆ.

- ಪ್ರತಿ ಕೇಂದ್ರದಲ್ಲಿ 20 ಹಿಂದುಳಿದ ವರ್ಗಗಳ ಮಹಿಳೆಯರಿಗೆ ಪ್ರವೇಶಾವಕಾಶ
- ಮಾಸಿಕ ರೂ.300/–ರಂತೆ ಸ್ಟೈಪೆಂಡ್ ನೀಡಿಕೆ 12 ತಿಂಗಳಿಗೆ
- ತರಬೇತಿ ಮುಕ್ತಾಯದ ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಉಚಿತ ಹೊಲಿಗೆ ಯಂತ್ರ ನೀಡಿಕೆ

5. ಕಾನೂನು ಪದವೀಧರರಿಗೆ ಸ್ಟೈಪೆಂಡ್

ವಾರ್ಷಿಕ ಆದಾಯ ಮಿತಿ: ಪ್ರವರ್ಗ–1 ರೂ.3.50 ಲಕ್ಷ
ಪ್ರವರ್ಗ–2ಎ, 2ಬಿ, 3ಎ, ಮತ್ತು
3ಬಿ – ರೂ.2.50 ಲಕ್ಷ

ಕಾನೂನು ಪದವಿಯನ್ನು ಪಡೆದಿರುವ ಹಿಂದುಳಿದ ವರ್ಗಗಳ ನಿರುದ್ಯೋಗಿಗಳಿಗೆ 4 ವರ್ಷಗಳ ಅವಧಿಗೆ ವಕೀಲ ವೃತ್ತಿಯಲ್ಲಿ ತರಬೇತಿಯನ್ನು ನೀಡಲಾಗುತ್ತದೆ.

- ಜಿಲ್ಲಾ ಸಮಿತಿಯ ಮೂಲಕ ಆಯ್ಕೆ
- ಮಾಸಿಕ ಸ್ಟೈಪೆಂಡ್ ಪ್ರತಿ ಅಭ್ಯರ್ಥಿಗೆ ರೂ.1,000/–ರಂತೆ

III. ಅಲೆಮಾರಿ/ಅರೆ ಅಲೆಮಾರಿ ಜನಾಂಗದ ಅಭಿವೃದ್ಧಿ

1. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳು

ಅ. ಮಾಧ್ಯಮಿಕ/ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹಧನ
ಆ. ಮೆಟ್ರಿಕ್–ನಂತರದ ವಿದ್ಯಾರ್ಥಿಗಳಿಗೆ ಅರ್ಹತಾ ವಿದ್ಯಾರ್ಥಿ ವೇತನ
ಇ. ಆಶ್ರಮಶಾಲೆಗಳ ನಿರ್ವಹಣೆ
ಈ. ಪ್ರತಿಷ್ಠಿತ ಶಾಲೆಗಳಲ್ಲಿ ಅಧ್ಯಯನ ಮಾಡುತ್ತಿರುವ ನವೀಕರಣ ವಿದ್ಯಾರ್ಥಿಗಳ ಬೋಧನಾ ಹಾಗೂ ವಸತಿನಿಲಯದ ಶುಲ್ಕ ಪಾವತಿ
ಉ. ನಿವೇಶನ ರಹಿತರಿಗೆ ನಿವೇಶನ ಒದಗಿಸಲು ಜಮೀನು ಖರೀದಿ
ಊ. ವಸತಿ ಸೌಲಭ್ಯ
ಎ. ಅಲೆಮಾರಿ/ಅರೆ ಅಲೆಮಾರಿ ಜನಾಂಗದ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯ ಒದಗಿಸುವುದು.

2. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮೂಲಕ ಅನುಷ್ಠಾನ ಮಾಡುತ್ತಿರುವ ಕಾರ್ಯಕ್ರಮಗಳ ವಿವರ

ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮೂಲಕ ಅಲೆಮಾರಿ/ ಅರೆ ಅಲೆಮಾರಿ ಜನಾಂಗದವರ ಅಭಿವೃದ್ಧಿಗಾಗಿ ಗಂಗಾ ಕಲ್ಯಾಣ, ಭೂ ಒಡೆತನ ಯೋಜನೆ, ಸ್ವಯಂ ಉದ್ಯೋಗ ಸಾಲ ಮತ್ತು ಸಹಾಯಧನ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.

(ಅಲೆಮಾರಿ / ಅರೆ ಅಲೆಮಾರಿ ಜನಾಂಗಗಳ ಅಭಿವೃದ್ಧಿಗೆ ಅನುಷ್ಠಾನ ಮಾಡುತ್ತಿರುವ ಪ್ರತಿ ಕಾರ್ಯಕ್ರಮದ ಬಗ್ಗೆ ವಿವರಗಳನ್ನು ಪ್ರತ್ಯೇಕ ಪುಸ್ತಿಕೆಯಲ್ಲಿ ಪ್ರಕಟಿಸಲಾಗಿದೆ.)

IV. ವಿವಿಧ ಸಮುದಾಯಗಳ ಅಭಿವೃದ್ಧಿ :

ಹಿಂದುಳಿದ ವರ್ಗಗಳ ವಿವಿಧ ಜನಾಂಗಗಳ ಸಂಘ–ಸಂಸ್ಥೆಗಳು ನಿರ್ಮಿಸುವ ಸಮುದಾಯ ಭವನ, ವಿದ್ಯಾರ್ಥಿನಿಲಯ ಕಟ್ಟಡಗಳ ಅಂದಾಜು ವೆಚ್ಚದ ಶೇ.50ರಷ್ಟು, ಕನಿಷ್ಠ ರೂ.5.00 ಲಕ್ಷ ಸಹಾಯಧನ ಮಂಜೂರು ಮಾಡಲಾಗುತ್ತದೆ.

ಆಯುಕ್ತರ ಕಛೇರಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ನಂ. 16 ಡಿ, ದೇವರಾಜ ಅರಸು ಭವನ
ವಿಲ್ಸನ್ ಬ್ಲಾಂಕ್ ಜೆಟ್ ಏರಿಯಾ, ಸಂಪಂಗಿರಾಮನಗರ, ಬೆಂಗಳೂರು–560 052
(ಫೋ) 080–22374836 ಫ್ಯಾಕ್ಸ್ 080–22374837
E-mail : bcdbng@kar.nic.in
Website : www.backwardclasses.kar.nic.in

ಅನುಬಂಧ-2

ಶ್ರೀ ಬಣಕಾರ್ ಯು ಬಿ (ಹಿರೇಕರೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 292 ಕ್ಕೆ ಉತ್ತರ

ಅ) ಹಾವೇರಿ ಜಿಲ್ಲೆಯಲ್ಲಿ ತಾಲ್ಲೂಕುವಾರು 2013-14 ನೇ ಸಾಲಿನಲ್ಲಿ ಎಲ್ಲಾ ಯೋಜನೆಗಳಲ್ಲಿ ನಿಗದಿಪಡಿಸಿದ ಗುರಿ

ಕ್ರ. ಸ.	ಯೋಜನೆಗಳು	ಗುರಿ (ರೂ. ಲಕ್ಷಗಳಲ್ಲಿ)							
		ಹಾವೇರಿ	ಬ್ಯಾಡಗಿ	ಹಾನಗಲ್	ಹಿರೇಕೆರೂರು	ರಾಣೇಬೆನ್ನೂರು	ಶಿಗ್ಗಾವ	ಸವಣೂರು	ಟ್ಯು
ರಾಜ್ಯವಲಯ ಕಾರ್ಯಕ್ರಮಗಳು									
1	ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹಧನ	0.50	0.20	0.20	0.30	2.30	0.20	0.50	4.20
2	ಮೆ.ನ.ದ ವಿದ್ಯಾರ್ಥಿಗಳಿಗೆ ಅರ್ಹತಾ ವಿದ್ಯಾರ್ಥಿ ವೇತನ	0.09	0.10	0.06	0.07	0.38	0.00	0.00	0.70
3	ಊಟ ವಸತಿ ಸಹಾಯ ಯೋಜನೆ (ಅಲೆಮಾರಿ ವಿದ್ಯಾರ್ಥಿಗಳಿಗೆ ಮಾತ್ರ)	3.15	1.44	1.55	1.34	9.36	0.21	0.14	17.18
1	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ	0.70	9.47	2.69	5.84	8.48	9.18	5.49	41.85
2	ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ	13.00	4.69	1.30	6.56	5.22	2.13	1.41	34.31
3	ಕೇಂದ್ರ ಪುರಸ್ಕೃತ ಮೆ.ಪೂ.ವಿದ್ಯಾರ್ಥಿ ವೇತನ	10.83	2.50	5.00	3.00	12.90	3.00	3.00	40.23
4	ಕೇಂದ್ರ ಪುರಸ್ಕೃತ ಮೆ.ನ.ವಿದ್ಯಾರ್ಥಿ ವೇತನ	25.32	3.85	15.87	10.76	26.88	6.24	2.78	91.70
5	ಊಟ ಮತ್ತು ವಸತಿ ಸಹಾಯ ಯೋಜನೆ:(ರಾಜ್ಯ ವಲಯ)	32.10	6.03	14.87	8.97	24.53	5.18	1.34	93.00
6	ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ನಿರ್ವಹಣೆ	77.86	0.00	15.75	13.53	10.37	14.22	0.00	131.73
7	ಮಾದರಿ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ನಿರ್ವಹಣೆ	29.25	0.00	0.00	0.00	0.00	0.00	0.00	29.25

ಕ್ರ ಸ.	ಯೋಜನೆಗಳು	ಗುರಿ (ರೂ. ಲಕ್ಷಗಳಲ್ಲಿ)							
		ಹಾವೇರಿ	ಬ್ಯಾಡಗಿ	ಹಾನಗಲ್	ಹಿರೇಕೆರೂರು	ರಾಣೇಬೆನ್ನೂರು	ಶಿಗ್ಗಾವ	ಸವಣೂರು	ಟ್ಟು
ಯೋಜನೆ ಕಾರ್ಯಕ್ರಮಗಳು									
1	ಹಿದುಳಿದ ವರ್ಗಗಳ ವಿದ್ಯಾರ್ಥಿನಿಲುಗಳ ನಿರ್ವಹಣೆ 2225-00-103-0-26	114.00	31.79	52.00	37.19	58.26	36.23	20.25	349.72
2	ಕಟ್ಟಡಗಳ ವೆಚ್ಚ ಮತ್ತು ನಿರ್ವಹಣೆ 2225-00-103-0-40	3.00	3.00	0.00	3.00	0.00	3.00	3.00	15.00
3	ಹೂಲಿಗೆ ತರಬೇತಿ ಕೇದ್ರಗಳು ಮತ್ತು ಹೊಸ ಕೇದ್ರಗಳ 2225-00-103-0-53	0.43	0.00	0.43	0.00	0.00	0.00	0.00	0.86
4	ವಕೀಲರಿಗೆ ಪ್ರೋತ್ಸಾಹ ಧನ 2225-00-103-0-58	0.76	0.58	1.02	0.50	1.08	0.40	0.46	4.80
5	ಮೆ.ಪೂ./ಮೆ.ನ.ದ ವಿದ್ಯಾರ್ಥಿನಿಲುಗಳ ಸುಧಾರಣೆ 2225-00-103-0-72	1.80	1.00	2.00	1.00	1.70	1.50	1.00	10.00
6	ಹಿದುಳಿದ ವರ್ಗಗಳ ತಾಲೂಕ ವಿಸ್ತರಣಾ ಕೇರಿಗಳು 2225-00-103-0-74	0.00	0.00	0.00	3.90	0.00	0.00	4.44	8.34
ಯೋಜನೇತರ ಕಾರ್ಯಕ್ರಮಗಳು									
1	ಹಿದುಳಿದ ವರ್ಗಗಳ ವಿದ್ಯಾರ್ಥಿ ನಿಲುಗಳ ನಿರ್ವಹಣೆ 2225-00-103-0-26	124.00	56.24	102.31	48.28	100.70	85.87	59.77	577.17
2	ಇತರೆ ಹಿದುಳಿದ ವರ್ಗಗಳಿಗೆ ಇತರೆ ಯೋಜನೆಗಳು 2225-00-103-0-28	37.21	13.18	17.82	62.09	91.67	14.09	1.73	237.79
3	ಕಾರ್ಯನಿರ್ವಾಹಕ ಸಿಬ್ಬದಿ 2225-00-103-0-39	26.41	0.00	0.00	0.00	0.00	0.00	0.00	26.41
4	ದೇವರಾಜ ಅರಸುರವರ ಹುಟ್ಟು ಹಬ್ಬ ದಿನಾಚರಣೆ 2225-00-103-0-56	0.25	0.00	0.00	0.00	0.00	0.00	0.00	0.25
5	ಮೆ.ಪೂ./ಮೆ.ನ.ದ ವಿದ್ಯಾರ್ಥಿನಿಲುಗಳ ಸುಧಾರಣೆ 2225-00-103-0-72	0.00	0.00	0.00	0.48	0.00	0.44	0.00	0.92

ಕ್ರ. ಸ.	ಯೋಜನೆಗಳು	ಗುರಿ (ರೂ. ಲಕ್ಷಗಳಲ್ಲಿ)							
		ಹಾವೇರಿ	ಬ್ಯಾಡಗಿ	ಹಾನಗಲ್	ಹಿರೇಕೆರೂರು	ರಾಣೇಬೆನ್ನೂರು	ಶಿಗ್ಗಾವ	ಸವಣೂರು	ಟ್ಯು
6	ಅನಾಥಾಲಯಗಳಿಗೆ ಸಹಾಯಧನ 2225-00-103-0-73	0.00	0.00	0.00	0.00	11.84	0.00	0.00	11.84
7	ಹಿದುಳಿದ ವರ್ಗಗಳ ತಾಲೂಕ ವಿಸ್ತರಣಾ ಕೇರಿಗಳು 2225-00-103-0-74	5.89	5.22	4.36	0.00	5.24	4.82	0.00	25.53
8	ಹೊಲಿಗೆ ತರಬೇತಿ ಕೇದ್ರಗಳು 2225-00-103-0-78	1.95	0.00	1.95	0.00	1.94	0.00	0.00	5.84

ಆಯುಕ್ತರು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು

ಅನುಬಂಧ–3

ಶ್ರೀ ಬಣಕಾರ್ ಯು ಬಿ (ಹಿರೇಕರೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 292 ಕ್ಕೆ ಉತ್ತರ

ಇ) ದಿ: 31.03.2014 ರೊಳಗಾಗಿ ಹಾವೇರಿ ಜಿಲ್ಲೆಯಲ್ಲಿ ತಾಲ್ಲೂಕುವಾರು ಎಲ್ಲಾ ಯೋಜನಾವಾರು ಸಾಧಿಸಿದ ಪ್ರಗತಿ:

ಕ್ರ. ಸ.	ಯೋಜನೆಗಳು	ಸಾಧನೆ (ರೂ. ಲಕ್ಷಗಳಲ್ಲಿ)							
		ಹಾವೇರಿ	ಬ್ಯಾಡಗಿ	ಹಾನಗಲ್	ಹಿರೇಕೆರೂರು	ರಾಣೇಬೆನ್ನೂರು	ಶಿಗ್ಗಾವ	ಸವಣೂರು	ಒಟ್ಟು
ರಾಜ್ಯವಲಯ ಯೋಜನೆ									
1	ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹಧನ	0.47	0.20	0.20	0.30	2.30	0.20	0.48	4.15
2	ಮೆ.ನ.ದ ವಿದ್ಯಾರ್ಥಿಗಳಿಗೆ ಅರ್ಹತಾ ವಿದ್ಯಾರ್ಥಿ ವೇತನ	0.09	0.10	0.06	0.07	0.38	0.00	0.00	0.70
3	ಊಟ ವಸತಿ ಸಹಾಯ ಯೋಜನೆ (ಅಲೆಮಾರಿ ವಿದ್ಯಾರ್ಥಿಗಳಿಗೆ ಮಾತ್ರ)	2.99	1.37	1.55	1.07	4.61	0.21	0.12	11.90
4	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ	0.68	4.78	2.69	5.84	8.28	6.28	5.49	34.03
5	ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ	13.00	1.63	1.30	3.90	5.21	2.13	1.41	28.58
6	ಕೇಂದ್ರ ಪುರಸ್ಕೃತ ಮೆ.ಪೂ.ವಿದ್ಯಾರ್ಥಿ ವೇತನ	5.83	2.41	4.99	0.87	8.29	0.27	3.00	25.66
7	ಕೇಂದ್ರ ಪುರಸ್ಕೃತ ಮೆ.ನ.ವಿದ್ಯಾರ್ಥಿ ವೇತನ	25.31	3.85	15.87	10.76	26.87	6.24	2.78	91.68
8	ಊಟ ಮತ್ತು ವಸತಿ ಸಹಾಯ ಯೋಜನೆ:(ರಾಜ್ಯ ವಲಯ)	32.04	6.03	14.87	8.97	23.73	5.18	1.34	92.15
9	ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ನಿರ್ವಹಣೆ 2225-03-277-2-53	77.86	0.00	15.75	13.53	10.37	14.22	0.00	131.73
10	ಮಾದರಿ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ನಿರ್ವಹಣೆ 2225-03-277-3-10	29.25	0.00	0.00	0.00	0.00	0.00	0.00	29.25
ಯೋಜನೆ ಕಾರ್ಯಕ್ರಮಗಳು									
1	ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲುಗಳ ನಿರ್ವಹಣೆ 2225-00-103-0-26	114.00	31.79	52.00	37.09	58.21	36.25	20.25	349.59
2	ಕಟ್ಟಡಗಳ ಬೆಚ್ಚ ಮತ್ತು ನಿರ್ವಹಣೆ 2225-00-103-0-40	3.00	3.00	0.00	3.00	0.00	3.00	3.00	15.00

ಕ್ರ. ಸ.	ಯೋಜನೆಗಳು	ಸಾಧನೆ (ರೂ. ಲಕ್ಷಗಳಲ್ಲಿ)							
		ಹಾವೇರಿ	ಬ್ಯಾಡಗಿ	ಹಾನಗಲ್	ಹಿರೇಕೆರೂರು	ರಾಣೇಬೆನ್ನೂರು	ಶಿಗ್ಗಾವ	ಸವಣೂರು	ಒಟ್ಟು
3	ಹೊಲಿಗೆ ತರಬೇತಿ ಕೇಂದ್ರಗಳು ಮತ್ತು ಹೊಸ ಕೇಂದ್ರಗಳ 2225-00-103-0-53	0.43	0.00	0.43	0.00	0.00	0.00	0.00	0.86
4	ವಕೀಲರಿಗೆ ಪ್ರೋತ್ಸಾಹ ಧನ 2225-00-103-0-58	0.50	0.35	0.67	0.32	0.71	0.25	0.25	3.05
5	ಮೆ.ಪೂ./ಮೆ.ಸ.ದ ವಿದ್ಯಾರ್ಥಿನಿಲಯಗಳ ಸುಧಾರಣೆ 2225-00-103-0-72	1.80	1.00	2.00	1.00	1.70	1.50	1.00	10.00
6	ಹಿಂದುಳಿದ ವರ್ಗಗಳ ತಾಲೂಕ ವಿಸ್ತರಣಾ ಕೇಂದ್ರಗಳು 2225-00-103-0-74	0.00	0.00	0.00	3.90	0.00	0.00	4.44	8.34
ಯೋಜನೇತರ ಕಾರ್ಯಕ್ರಮಗಳು									
1	ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲುಗಳ ನಿರ್ವಹಕೆ 2225-00-103-0-26	123.89	54.59	101.93	48.28	100.65	85.78	58.08	573.20
2	ಇತರೆ ಹಿಂದುಳಿದ ವರ್ಗಗಳಿಗೆ ಇತರೆ ರಿಯಾಯತಿಗಳು 2225-00-103-0-28	37.21	13.18	17.82	62.09	91.67	14.09	1.73	237.79
3	ಕಾರ್ಯನಿರ್ವಾಹಕ ಸಿಬ್ಬದಿ 2225-00-103-0-39	25.05	0.00	0.00	0.00	0.00	0.00	0.00	25.05
4	ದೇವರಾಜ ಅರಸುರವರ ಹುಟ್ಟು ಹಬ್ಬ ದಿನಾಚರಣೆ 2225-00-103-0-56	0.25	0.00	0.00	0.00	0.00	0.00	0.00	0.25
1	ಮೆ.ಪೂ./ಮೆ.ಸ.ದ ವಿದ್ಯಾರ್ಥಿನಿಲಯಗಳ ಸುಧಾರಣೆ 2225-00-103-0-72	0.00	0.00	0.00	0.48	0.00	0.44	0.00	0.92
2	ಅನಾಥಾಲಯಗಳಿಗೆ ಸಹಾಯಧನ 2225-00-103-0-73	0.00	0.00	0.00	0.00	6.04	0.00	0.00	6.04

ಕ್ರ. ಸ.	ಯೋಜನೆಗಳು	ಸಾಧನೆ (ರೂ. ಲಕ್ಷಗಳಲ್ಲಿ)							
		ಹಾವೇರಿ	ಬ್ಯಾಡಗಿ	ಹಾನಗಲ್	ಹಿರೇಕೆರೂರು	ರಾಣೇಬೆನ್ನೂರು	ಶಿಗ್ಗಾವ	ಸವಣೂರು	ಒಟ್ಟು
3	ಹಿಂದುಳಿದ ವರ್ಗಗಳ ತಾಲೂಕ ವಿಸ್ತರಣಾ ಕೇಂದ್ರಗಳು 2225-00-103-0-74	5.49	5.15	3.86	0.00	5.24	4.82	0.00	24.56
4	ಹೊಲಿಗೆ ತರಬೇತಿ ಕೇಂದ್ರಗಳು 2225-00-103-0-78	1.95	0.00	1.95	0.00	1.94	0.00	0.00	5.84

ತಂಜುಕ್ತರು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು